ಹರಡಿ, ಮಧ್ಯದಲ್ಲಿ ಕುಳಿತು, 'ನೀವಿಬ್ರು ಇಲ್ಲಿ ಕುಳಿತುಕೊಳ್ಳಿ...' ಎಂದು ತನ್ನ ಎಡ ಬಲವನ್ನು ತೋರಿಸಿ ನಿರ್ದೇಶಿಸಿದಳು.

'ಅಕಸ್ಮಾತ್ ತಿನ್ನುವಾಗ ಚೆಲ್ಲಿದರೆ ಕಾಗದದ ಮೇಲೆ ಬೀಳುತ್ತೆ. ಕ್ಲೀನ್ ಮಾಡೋದು ಸುಲಭ. ಆಮೇಲೆ ಇರುವೆ ಮುತ್ತೊಳ್ಳಲ್ಲ' ಎಂದಳು ಪಿಂಕಿ. ಪೂರಿ ಪಲ್ಯ ತಿನ್ನುತ್ತ, 'ಚೆನ್ನಾಗಿದೆ ಅಜ್ಜಿಆಂಟಿ. ಫ್ರಿಜ್ಜಲ್ಲಿ ಶ್ರೀಕಂದ್ ಇದ್ಯಾ?' ಎಂದು ಕೇಳಿದಳು.

'ಸಾರಿ ಪುಟ್ಟಿ, ಇಲ್ಲ...' ಎಂದು ಹೇಳುವಾಗ ನನಗೆ ಸ್ವಲ್ಪ ಪಿಚ್ ಅನ್ನಿಸಿತು.

'ಮುಂದಿನ ಸಾರಿ ತಂದು ಇಟ್ಟಿರಿ. ಪೂರಿ ಜೊತೆ ತಿನ್ನಕ್ಕೆ ಚೆನ್ನಾಗಿರುತ್ತೆ. ಅಲ್ವಾ...?' ಎಂದು ತನ್ನ ಗೆಳತಿಯರನ್ನು ಕೇಳಿದಳು. ಅವರಿಬ್ಬರೂ ಶ್ರೀಕಂದ್ ಹೆಸರು ಕೇಳುತ್ತಿದ್ದಂತೆ 'ಹೌದು, ಹೌದು...' ಎಂದು ಅಂಗೀಕಾರದ ಮುದ್ರೆಯನ್ನು ಒತ್ತಿದರು.

ತಿಂಡಿ ತಿಂದು, ಹಾಲಿನಲ್ಲಿ ವಾರಪತ್ರಿಕೆಯನ್ನು ಓದುತ್ತಿದ್ದ ಇವರ ಬಳಿ ಹೋಗಿ 'ತಿಂಡಿ ತಿಂದು ಆಯ್ತಾ ಅಂಕಲ್ ತಾತ?' ಅಂತ ಪ್ರೀತಿಯಿಂದ ಪಿಂಕಿ ಕೇಳಿದಳು.

'ಹೂಂ, ಆಯ್ತು ಮರಿ. ಚೆನ್ನಾಗಿತ್ತಲ್ವಾ, ನೀನು ಎಷ್ಟು ಪೂರಿ ತಿಂದೆ?' ಅಂತ ಅವರು ಕೇಳಿದರು.

'ಚೆನ್ನಾಗಿತ್ತು ತಾತ, ಹೊಟ್ಟೆ ತುಂಬಾ ತಿಂದೆ. ಆದರೆ ನೀವು ತಿಂಡಿತಿಂದು ಹೀಗೆ ಸುಮ್ಮನೆ ಕುಳಿತುಬಿಟ್ಟರೆ ಹೇಗೆ?'

'ಯಾಕಮ್ಮ? ಏನು ಮಾಡಬೇಕಾಗಿತ್ತು?' ಎಂದು ವಾರಪತ್ರಿಕೆಯನ್ನು ಮಡಚುತ್ತಾ ಅವರು ಕೇಳಿದರು.

'ಮನೆಯಲ್ಲಿ ಮೂರು ಜನ ಮಕ್ಕಳು ಬಂದಿದೀವಿ. ಐಸ್‌ಕ್ರೀಮ್ ತಂದು ಕೊಡಬೇಕು ಅಂತ ಮರೆತುಹೋಯ್ತಾ?'

ಅವರು ದಡಬಡಾಯಿಸಿ ಎದ್ದು, 'ಇಲ್ಲ ಮರಿ, ಹೇಳು ನಿಂಗೆ ಯಾವ ಐಸ್‌ಕ್ರೀಮ್ ಬೇಕು?' ಎಂದರು.

ಪಿಂಕಿಯು ಅಶ್ವಿನಿ, ಭರಣಿ ಕಡೆ ನೋಡಿದಳು. ಅವರು 'ಸ್ಟ್ರಾಬೆರಿ...' ಎಂದರು.

'ಓ, ನಂಗೂ ಸ್ಟ್ರಾಬೆರಿ ತುಂಬಾ ಇಷ್ಟ ಅಂಕಲ್ ತಾತ' ಎಂದಳು.

'ಸರಿ, ಮೂರು ಸ್ಟ್ರಾಬೆರಿ ತರ್ತೀನಿ...' ಎಂದು ಅವರು ಹೊರಟರು.

'ಒಂದು ನಿಮಿಷ, ಸ್ಟ್ರಾಬೆರಿ ಬೇಡ. ಮೂರು ಕುಲ್ಫಿ ತನ್ನಿ. ಈಗ ಒಂದು ಕುಲ್ಫಿಗೆ ಒಂದು ವೆನಿಲ್ಲ ಫ್ರೀ ಕೊಡ್ತಾರೆ. ನಮಗೆ ಎರಡೆರಡು ಐಸ್‌ಕ್ರೀಮ್ ಬರುತ್ತೆ' ಎಂದು ತನ್ನ ಮಾರುಕಟ್ಟೆಯ ಜ್ಞಾನವನ್ನು ಹೊರಹಾಕಿದಳು.

ಅಶ್ವಿನಿ ಹಾಗೂ ಭರಣಿ ಇಬ್ಬರು 'ಹೌದಾ! ಹಾಗಾದರೆ ಕುಲ್ಫಿ, ವೆನಿಲ್ಲಾ ತಂದ್ಬಿಡಿ ತಾತ' ಎಂದು ಖುಷಿಯಾಗಿ ಹೇಳಿದರು.

ಅಷ್ಟು ಹೊತ್ತಿಗೆ ಪೂನಿ ಕೈಯಲ್ಲಿ ಇವರಿಗೆ ಕಾಫಿ ಕಳಿಸಿದ್ದೆ. 'ಓ ಕಾಫಿ. ಇದನ್ನು ಕುಡಿದ ಮೇಲೆ ನಿಮಗೆ ಐಸ್‌ಕ್ರೀಮ್ ತರ್ತೀನಿ. ಸರೀನಾ...' ಎಂದು ಪಿಂಕಿಗೆ ಹೇಳಿ, ಅವರು ಕುಳಿತು ಕಾಫಿಯನ್ನು ಆಸ್ವಾದಿಸತೊಡಗಿದರು.

ತಕ್ಷಣ ಪಿಂಕಿ ಓಡಿ ಅಡುಗೆಮನೆಗೆ ನುಗ್ಗಿದಳು.



ಅವಳ ಹಿಂದೆ ಬಾಲಂಗೋಚಿಯ ತರಹ ಅಶ್ವಿನಿ ಮತ್ತು ಭರಣಿ. 'ಅಲ್ಲ ಅಜ್ಜಿಆಂಟಿ, ತಿಂಡಿ ತಿಂದಮೇಲೆ ನೀವೆಲ್ಲ ಕಾಫಿ ಕುಡಿತಿದ್ದೀರಿ. ನಾವು ಚಿಕ್ಕವರು ಇದೀವಿ ಅಂತ ಮರೆತೇಹೋಯ್ತಾ ನಿಮಗೆ?' ಎಂದು ಪಿಂಕಿ ಆಕ್ಷೇಪಣೆ ಮಾಡಿದಳು.

'ಇಲ್ಲ ಪುಟ್ಟಿ, ನಾವು ಕಾಫಿ ಕುಡಿದ ಮೇಲೆ ನಿಮಗೆ ಏನು ಬೇಕು ಅಂತ ಕೇಳೋಣ ಅಂತಿದ್ದೆ. ಆದರೆ ನೀನೇ ಐಸ್‌ಕ್ರೀಮ್ ತನ್ನಿ ಅಂತ ತಾತನ ಹತ್ತಿರ ಹೇಳಿದ್ಯಲ್ಲ. ಅದಕ್ಕೆ ಸುಮ್ಮನಾದೆ' ಎಂದೆ.

'ಅಯ್ಯೋ, ಅದನ್ನ ಫ್ರಿಜ್ಜಲ್ಲಿಟ್ಟು ಆಮೇಲೆ ತಿಂತೀವಿ. ಈಗ ಬಿಸಿಬಿಸಿಯಾಗಿ ಕುಡಿಯೋಕೆ ಏನಾದ್ರೂ ಕೊಡಿ' ಎಂದು ಪಿಂಕಿಯ ಒತ್ತಾಯಪೂರ್ವಕ ಬೇಡಿಕೆ ಬಂತು.

'ಇವರಿಬ್ಬರು ಕಾಫಿ ಕುಡಿಯುವುದಿಲ್ಲ. ನೀನು...?' ನಾನು ಕೇಳಿದೆ.

'ನಾನು ಇನ್ನೂ ಕಾಫಿ ಕುಡೀತಿಲ್ಲ. ಹಾರ್ಲಿಕ್ಸ್, ಬೋರ್ನ್‌ವಿಟಾನೋ ಕೊಡಿ' ಎಂದಳು ಪಿಂಕಿ.

ಅವೆರಡೂ ಇರಲಿಲ್ಲ. ಅವಳಿಗೆ ತಿಳಿಸಿ, 'ಹಾಲು ಕೊಡ್ಲಾ...' ಎಂದು ವಿಚಾರಿಸಿದೆ.

'ಬರೀ ಹಾಲು ಬೇಡ ಅಜ್ಜಿಆಂಟಿ. ಹೋಗಲಿ ಯಾವ್ಯಾವ ಬಿಸ್ಕತ್ ಇದೆ?' ಪಿಂಕಿ ಕೇಳಿದಳು.

'ಈಗ ಯಾಕಮ್ಮ ಬಿಸ್ಕತ್ತು. ಈಗ ತಾನೇ ತಿಂಡಿ ತಿಂದಿದಿರಲ್ಲ...' ಎನ್ನುತ್ತಾ ಇದ್ದ ಬಿಸ್ಕತ್ತಿನ ಪೊಟ್ಟಣಗಳನ್ನು ತೋರಿಸಿದೆ.

'ಈ ಬಿಸ್ಕತ್ ಕೊಡಿ' ಎಂದು ಒಂದು ಕ್ರೀಮ್ ಬಿಸ್ಕತ್ ಪೊಟ್ಟಣ ತೆಗೆದುಕೊಂಡಳು.

'ಈಗ ಮೂರು ಲೋಟ ಹಾಲು ಬಿಸಿಮಾಡಿ. ಹಾಲು ಜಾಸ್ತಿ ಇಲ್ದೆ ಇದ್ರೆ ಸ್ವಲ್ಪ ನೀರು ಹಾಕಿ ಪರವಾಗಿಲ್ಲ. ಮುಕ್ಕಾಲು ಲೋಟ ಆದ್ರೂ ಸಾಕಾಗುತ್ತೆ' ಎಂದಳು.

ನಾನು ಹಾಲನ್ನು ಬಿಸಿಮಾಡಲು ಇಡುತ್ತಾ ಪೂನಿ ಮುಖ ನೋಡಿದೆ. ಅವಳು ಬಾಯಿಯ ಮೇಲೆ ಬೆರಳುಗಳನ್ನು ಮುಚ್ಚಿಕೊಂಡು ನಗುತ್ತಿದ್ದಳು.

'ಈವಾಗ ಆ ಹಾಲಿಗೆ ಮೂರು ಚಮಚ ಸಕ್ಕರೆ ಹಾಕಿ. ಆಮೇಲೆ ಇಕ್ಕಳದಲ್ಲಿ ಹಿಡಿದುಕೊಂಡು ಆಡಿಸಿ ಸಕ್ಕರೆ ಕರಗುತ್ತೆ' ಎಂದಳು.

ನಾನು ಹೊಸದಾಗಿ ಅಡುಗೆಯನ್ನು ಕಲಿಯುತ್ತಿರುವವಳಂತೆ, ಅವಳ ಸೂಚನೆಯನ್ನು ಅಕ್ಷರಶಃ ಪಾಲಿಸಿದೆ. ಪಿಂಕಿ ಪೊಟ್ಟಣದಿಂದ ಎರಡೆರಡು ಚಾಕ್ಲೇಟ್ ಕ್ರೀಮ್ ಬಿಸ್ಕತ್ತನ್ನು ತೆಗೆದು ಅಶ್ವಿನಿ ಹಾಗೂ ಭರಣಿಗೆ ಕೊಟ್ಟು, ತಾನೂ ಎರಡು ಬಿಸ್ಕತ್ತನ್ನು ತೆಗೆದುಕೊಂಡಳು. ಅದನ್ನ ತಿನ್ನಲು ಹೋದ ಭರಣಿಗೆ, 'ತಿನ್ನಬೇಡ, ಹೀಗೆ ಹಾಲಿನಲ್ಲಿ ಹಾಕು' ಎಂದು ತನ್ನ ಕೈಯಲ್ಲಿದ್ದ ಕ್ರೀಮ್ ಬಿಸ್ಕತ್ತನ್ನು ಹಾಲಿಗೆ ಹಾಕಿದಳು. ಅವಳ ಗೆಳತಿಯರು ಹಾಗೆ ಮಾಡಿದರು.

'ಅಜ್ಜಿಆಂಟಿ, ಈಗ ಹಾಲನ್ನು ಚೆನ್ನಾಗಿ ಬೆರೆಸಿ ಮೂರೂ ಲೋಟಕ್ಕೆ ಹಾಕಿಬಿಡಿ. ಚಾಕ್ಲೇಟ್ ಮಿಲ್ಕ್ ರೆಡಿ ಆಯ್ತು ನೋಡಿ' ಎಂದಳು. ನನ್ನ ಮೊಮ್ಮಕ್ಕಳ ಜೊತೆಗೆ ನನಗೂ ಆಶ್ಚರ್ಯವಾಗಿತ್ತು. 'ಎಲಾ ಚೂಟಿ ಹುಡುಗಿ!' ಎಂದುಕೊಂಡೆ.

ಸಂಜೆ ಅವರು ಮನೆಗೆ ಹೊರಟುನಿಂತಾಗ, ಪಿಂಕಿ ತನ್ನ ಸ್ನೇಹಿತೆಯರಿಗೆ ಆಟದ ಸಾಮಾನುಗಳನ್ನು ಅವುಗಳ ಸ್ಥಳಕ್ಕೆ ಇಟ್ಟುಬಿಡುವಂತೆ ಹೇಳಿ, ತಾನು ಕೈಗೂಡಿಸಿದಳು. ಓದಲು ತೆಗೆದುಕೊಂಡಿದ್ದ ಪುಸ್ತಕಗಳನ್ನು ಮೇಜಿನ ಮೇಲೆ ಓರಣವಾಗಿ ಜೋಡಿಸಿಟ್ಟಳು.

ಅನಂತರ 'ಅಜ್ಜಿಆಂಟಿ, ನನಗೆ ನಿಮ್ಮ ಮನೆ ತುಂಬಾ ಇಷ್ಟವಾಯಿತು. ಇವರಿಬ್ಬರೂ ನನ್ನ ಬೆಸ್ಟ್ ಫ್ರೆಂಡ್ಸ್ ಆಗಿಹೋಗಿದ್ದಾರೆ. ಅದಕ್ಕೆ ಮುಂದಿನ ವಾರ ಒಂದು ರಾತ್ರಿ ಸ್ಲೀಪ್ ಓವರ್‌ಗೆ ನಿಮ್ಮನೆಗೆ ಬರ್ತೀನಿ. ಓಕೆನಾ...' ಎಂದು ತನ್ನನ್ನು ತಾನೇ ಆಹ್ವಾನಿಸಿಕೊಂಡಳು. ನನ್ನ ಉತ್ತರಕ್ಕೂ ಕಾಯದೆ, ಅಶ್ವಿನಿ, ಭರಣಿಯರಿಗೆ 'ನೀವು ಬರ್ತೀರಲ್ವಾ? ನಾನು ಬರುವಾಗ ನನ್ನ ಬೊಂಬೆ ತರ್ತೀನಿ, ಹಾಗೆ ಓದಕ್ಕೆ ಮೂರು ಪುಸ್ತಕ ತರ್ತೀನಿ! ಸರೀನಾ?' ಎಂದಳು.

ಇವರಿಬ್ಬರು ಕುಣಿದಾಡುತ್ತಾ 'ಓಕೆ, ಓಕೆ! ಬಾ! ನಾವು ಇಲ್ಲೇ ಸ್ಲೀಪ್ ಓವರ್ ಮಾಡೋಣ. ನಾವೂ ಪುಸ್ತಕ ತರ್ತೀವಿ. ರಾತ್ರಿಯೆಲ್ಲಾ ಓದ್ತಾ, ಮಾತಾಡ್ತಾ, ಆಟ ಆಡೋಣ...' ಎಂದರು.

ಆಟೊದಲ್ಲಿ ಕುಳಿತುಕೊಳ್ಳುವ ಮುಂಚೆ ಪೂನಿ ನಗುತ್ತಾ ನನಗೆ 'ಹೋಗಿ ರೆಸ್ಟ್ ತಗೋ! ನಾಳೆ ಫೋನಲ್ಲಿ ಮಾತಾಡೋಣ' ಎಂದಳು.

ಪಿಂಕಿ ನನಗೆ 'ತುಂಬಾ ಥ್ಯಾಂಕ್ಸ್ ಅಜ್ಜಿಆಂಟಿ, ನೀವು ಇವರಿಬ್ಬರನ್ನು ಕರೆದುಕೊಂಡು ನಮ್ಮ ಮನೆಗೆ ಬನ್ನಿ' ಎಂದು ಪ್ರೀತಿಯಿಂದ ಆಹ್ವಾನಿಸಿದಳು.

ಈ ಇಬ್ಬರು ಮಕ್ಕಳು ಪಿಂಕಿಯನ್ನು ಕರೆದುಕೊಂಡು ಹೋಗುತ್ತಿದ್ದ ಆಟೊರಿಕ್ಷಾವನ್ನೇ ಬೆರಗುಗಣ್ಣಿನಿಂದ ನೋಡುತ್ತಾ ನಿಂತರು. ಪಿಂಕಿಯಿಂದ ಈ ಬಿರುಬೇಸಿಗೆಯಲ್ಲೂ ಆಹ್ಲಾದಕರವಾದ ತಂಗಾಳಿ ಬೀಸಿದ ಅನುಭವವಾಗಿತ್ತು.

ಪ್ರತಿಕ್ರಿಯಿಸಿ: feedback@sudha.co.in